ಮುಖ್ಯಮಂತ್ರಿಗಳ ಹೇಳಿಕೆ

ವಿಷಯ : ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡಲಾಗುವ ರಿಯಾಯಿತಿಗಳ ಮತ್ತು ಪ್ರವಾಹ ಪೀಡಿತ ಪ್ರದೇಶಗಳ ಹಾಗೂ ಪ್ರತಿಕೂಲ ಹವಾಮಾನಕ್ಕೊಳಪಟ್ಟ ಪ್ರದೇಶಗಳ ಇತರ ರೈತರಿಗೆ ನೀಡಲಾಗುವ ರಿಯಾಯಿತಿಗಳ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) : ಸನ್ಮಾನ್ಯ ಸಭಾಧ್ಯಕ್ಷರೆ, ರೈತರ ಬಗ್ಗೆ ಒಂದು ಹೇಳಿಕೆ ಕೊಡುವುದಕ್ಕೆ ತಾವು ಅನುಮತಿ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(1) ರೈತರು ಪಡೆದುಕೊಂಡಿದ್ದಂತಹ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದು ಕುರಿತಂತೆ ದಿನಾಂಕ 12-3-1993ರಂದು ವಿಧಾನ ಸಭೆಯಲ್ಲಿ ಅರ್ಧ ಘಂಟೆ ಕಾಲ ಚರ್ಚೆ ನಡೆದು ಎರಡೂ ಬದಿಯ ಮಾನ್ಯ ಸದಸ್ಯರುಗಳು ಪ್ರವಾಹ ಮತ್ತು ಇತರ ಪ್ರಕೃತಿ ವಿಕೋಪಗಳಿಗೊಳಪಟ್ಟ ಪ್ರದೇಶಗಳಲ್ಲಿನ ರೈತರ ಅರ್ಥಿಕ ಸಂಕಷ್ಟಗಳ ಬಗ್ಗೆ ವಿಶ್ಲೇಷಿಸಿದರು. ಮುಖ್ಯವಾಗಿ ಕೃಷಿ ಉತ್ಪನ್ನಗಳ ಬೆಲೆ ಇಳಿತದ ಬಗ್ಗೆ ಗಮನ ಸೆಳೆಯುತ್ತ ರೈತರನ್ನು ಸಂಕಷ್ಟದಿಂದ ಪಾರು ಮಾಡಲು ಸೌಲಭ್ಯಗಳನ್ನು ಕಲ್ಪಿಸಬೇಕು ಎಂಬುದಾಗಿ ಮಾನ್ಯ ಸದಸ್ಯರುಗಳು ಒತ್ತಾಯಿಸಿದರು.

(2) ಮಾನ್ಯ ಸದಸ್ಯರುಗಳಿಗೆ ತಿಳಿದಿರುವಂತೆ ಬಡ್ಡಿಯು ಸೇರಿದಂತೆ ಪ್ರತಿ ಪ್ರಕರಣದಲ್ಲಿ ರೂ.10000-00 ಮಿತಿಯವರೆಗೆ ಸಾಲ ಮನ್ನಾ ಮಾಡಲಾದ ಕೃಷಿ ಮತ್ತು ಗ್ರಾಮೀಣ ಪತ್ತು ವಿಮೋಚನಾ ಯೋಜನೆಯನ್ನು 1989-90ನೇ ಸಾಲಿನಲ್ಲಿ ಭಾರತ ಸರ್ಕಾರವು ಘೋಷಿಸಿದ್ದಿತು. ಈ ಸಾಲ ಮನ್ನಾವನ್ನು ಘೋಷಿಸಿದ್ದಾಗ್ಯೂ ಸಹ ಕರ್ನಾಟಕ ರಾಜ್ಯದಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಬಾಕಿ ವಸೂಲಾತಿ ಪ್ರಮಾಣ 1989-90ನೇ ಸಾಲಿನಲ್ಲಿ ಉತ್ತೇಜನಕಾರಿಯಾಗಿರಲಿಲ್ಲ. ಅಲ್ಪಾವಧಿ ಸಾಲದ ವಸೂಲಾತಿ ಪ್ರಮಾಣ ಶೇ. 18.65 ಮಧ್ಯಮಾವಧಿ ಸಾಲದ ವಸೂಲಾತಿ ಪ್ರಮಾಣ ಶೇ. 9.24 ಮತ್ತು ದೀರ್ಘಾವಧಿ ಸಾಲದ ವಸೂಲಾತಿ ಪ್ರಮಾಣ ಶೇ.24 ರಷ್ಟಿತ್ತು. ಆದರೆ ಕಾಂಗ್ರೆಸ್(ಐ) ಏತರ ಸರ್ಕಾರಗಳು ಆಳ್ವಿಕೆ ನಡೆಸುತ್ತಿದ್ದ ರಾಜ್ಯಗಳು ಸೇರಿದಂತೆ ಅನೇಕ ರಾಜ್ಯ ಸರ್ಕಾರಗಳು ಕೃಷಿ ಮತ್ತು ಗ್ರಾಮೀಣ ಪತ್ತು ವಿಮೋಚನಾ ಯೋಜನೆಯನ್ನು ಕಾರ್ಯರೂಪಕ್ಕೆ ತಂದ ಸಂದರ್ಭದಲ್ಲಿ ಬಾಕಿ ಮೊತ್ತವನ್ನು ಬಡ್ಡಿಯೊಂದಿಗೆ ಸಂಬಂಧಪಟ್ಟ ರೈತರು ಮರುಪಾವತಿ ಮಾಡಿದರೆ ಮಾತ್ರ ಸಾಲ ಮನ್ನಾ ಸೌಲಭ್ಯ ಕೊಡುವುದಾಗಿ ರೂಪಿಸಿದ್ದವು. ಹಾಗಾಗಿ ಅವು ಬಹುತೇಕ ಸುಸ್ತಿ ಸಾಲಗಳನ್ನು ತಗ್ಗಿಸಲು ಸಾಧ್ಯವಾಯಿತು. ಆದರೆ ಕರ್ನಾಟಕ ರಾಜ್ಯ ಸರ್ಕಾರವು ಈ ರೀತಿ ಸಾಲ ಮರು ಪಾವತಿಯನ್ನು ಬಡ್ಡಿಯೂ ಸೇರಿದಂತೆ ರೂ.10000-00 ಗಳ ಸಾಲ ಮನ್ನಾ ಮಾಡುವುದಕ್ಕೆ ಸಂಬಂಧವೇರ್ಪಡಿಸಿರಲಿಲ್ಲ. ಹಾಗಾಗಿ ಕರ್ನಾಟಕದಲ್ಲಿ ಸಹಕಾರ ಸಂಸ್ಥೆ ಸುಸ್ತಿ ಪ್ರಮಾಣ ಬಹಳ ಅತೃಪ್ತಿದಾಯಕ ಆಗಿತ್ತು.